ಕ್ಕಾಗಲೀ ಆಗಿರಬಹುದು. ಒಳ್ಳೆಯ ಕೆಲಸ ಮಾಡಿದ ತಕ್ಷಣ ಹೊಗಳಿಕೆ, ಬೆನ್ನು ತಟ್ಟುವಿಕೆ ಹಾಗೂ ಸಣ್ಣ ಪುಟ್ಟ ಪುರಸ್ಕಾರ ನೀಡಿ ಮಕ್ಕಳನ್ನು ಹುರಿದುಂಬಿಸಿ. ಇದರಿಂದ ಪ್ರಭಾವಿತರಾದ ಮಕ್ಕಳು ಒಳ್ಳೆಯ ಕೆಲಸಗಳನ್ನು ಮಾಡಲು ಮುಂದಾಗುತ್ತಾರೆ. ಇನ್ನು ಕೆಟ್ಟ ಕೆಲಸ ಮಾಡಿದ ತಕ್ಷಣವೇ ಅದನ್ನು ಸರಿಪಡಿಸುವ ಕಾರ್ಯವೂ ಕೂಡಲೇ ಆಗಬೇಕು. 'ಈ ಕೆಲಸ ನನ್ನಿಂದಾಗದು, ನಿಮ್ಮ ಅಪ್ಪ ಬರಲಿ ಇರು' ಎಂದು ಹೇಳುವ ಅಮ್ಮಂದಿರು! ಅಥವಾ ಅಮ್ಮ ಮನೆಯಲ್ಲಿ ಇಲ್ಲದಾಗ, ಇದು ತಾಯಿಯ ಜವಾಬ್ದಾರಿಯೆಂದು ಕೈಕಟ್ಟಿ ಕೂರುವ ಅಪ್ಪಂದಿರು! ಈ ರೀತಿಯಾದ ನಿಧಾನವಾಗುವ ಪ್ರತಿಕ್ರಿಯೆಯಿಂದಲೂ ಮಕ್ಕಳ ಕೆಟ್ಟ ವರ್ತನೆಗಳು ವೃದ್ಧಿಸುತ್ತಾ ಹೋಗುತ್ತವೆ.

★ ಕೆಲವೊಮ್ಮೆ ಮಕ್ಕಳ ನಡವಳಿಕೆಯಲ್ಲಿ ಏರುಪೇರಾದಾಗ, ಮಾತು ಕೇಳದಾದಾಗ, ಅವರಿಗೆ ನೀಡಿರುವ ಸೌಲಭ್ಯಗಳನ್ನು ಸಿಗದಂತೆ ಮಾಡಿ. ಮಕ್ಕಳು ಸಾಮಾನ್ಯವಾಗಿ ದೂರದರ್ಶನ, ವೀಡಿಯೋ ಗೇಮ್ಸ್ ಹಾಗೂ ಕಂಪ್ಯೂಟರ್‌ಗೆ ಹೆಚ್ಚಾಗಿ ಅಂಟಿಕೊಂಡಿರುತ್ತಾರೆ. ಇವುಗಳನ್ನು ಕೆಲ ಸಮಯದವರೆಗೆ ಅವರಿಂದ ದೂರವಿಡಿ. ಆದರೆ ನೆನಪಿಡಿ, ಇವನ್ನು ಅವರು ಮತ್ತೆ ಪಡೆಯಲು ಸಾಧ್ಯ ಎಂಬುದನ್ನು ಅವರಿಗೆ ಮನವರಿಕೆ ಮಾಡಿಕೊಡಿ. ಈ ಅವಧಿ ಸೀಮಿತವಾಗಿರಲಿ. ಇಲ್ಲವಾದಲ್ಲಿ ಶಿಸ್ತು ಕಲಿಸಲು ಹೋಗಿ ಶಿಕ್ಷೆ ಕೊಟ್ಟ ಹಾಗೆ ಆಗುತ್ತದೆ.

★ ಮಕ್ಕಳಿಗೆ ಇಷ್ಟವಾಗದ ಕೆಲವು ವಿಷಯಗಳನ್ನು ಅವರ ಜೊತೆಗೇ ಕುಳಿತು ಅವರಿಗೆ ಮನನ ಮಾಡಿಸಿ. 'ಅರ್ಥವಾಗದ ವಿಷಯಗಳು ಯಾವಾಗಲೂ ಕಷ್ಟವಾಗಿ ತೋರುತ್ತವೆ. ಇಬ್ಬರೂ ಒಟ್ಟಿಗೆ ಕುಳಿತು ಕೆಲಸ ಮಾಡೋಣ' ಎಂದು ಹುರಿದುಂಬಿಸಿ. ಮಕ್ಕಳ ವಯಸ್ಸಿನ ಬಗ್ಗೆ ಯೋಚಿಸಬೇಡಿ. ಅವರು ಯಾವ ಹಂತದಲ್ಲಿ ಇದ್ದಾರೆ? ಅವರಿಗೆ ನಿಮ್ಮ ಅವಶ್ಯಕತೆ ಎಷ್ಟು? ಎಂಬುದರ ಬಗ್ಗೆ ಯೋಚಿಸಿ. ಪಕ್ಕದಲ್ಲಿ ಕುಳಿತು ಓದಿಸಬೇಕಲ್ಲ ಎಂಬ ಸಂಕೋಚ ಬೇಡ.

★ ಕೆಲ ಮಕ್ಕಳು ತಮ್ಮ ಪೋಷಕರಲ್ಲಿ ಎಲ್ಲಾ ವಿಷಯಗಳನ್ನೂ ಹೇಳಿಕೊಂಡರೆ, ಕೆಲವು ಮಕ್ಕಳು ಏನನ್ನೂ ಹೇಳುವುದಿಲ್ಲ. ಇದರರ್ಥ ಎಲ್ಲವನ್ನೂ ಹೇಳಿಕೊಳ್ಳುವ ಮಕ್ಕಳ ನಡವಳಿಕೆ ಸರಿ ಎಂದೂ, ಏನನ್ನೂ ಹೇಳಿಕೊಳ್ಳದ ಮಕ್ಕಳ ನಡವಳಿಕೆ ತಪ್ಪೆಂದೂ ಅಲ್ಲ. ಇದು ಅವರವರ ಸ್ವಭಾವ. ಅವರು ಯಾವುದಾದರೂ ವಿಷಯವನ್ನು ಹೇಳಲು ಬಂದಾಗ ಅಸಡ್ಡೆ ಮಾಡಬೇಡಿ. ಇಂತಹ ಮಕ್ಕಳು ಪೋಷಕರ ಗಮನ ತಮ್ಮೆಡೆಗೆ ಇರಲಿ ಎಂದು ಬಯಸುತ್ತಿರುತ್ತಾರೆ.

★ ಮಕ್ಕಳು ಹದಿಹರೆಯಕ್ಕೆ ಕಾಲಿಡುತ್ತಿದ್ದಂತೆಯೇ ಅವರೊಂದಿಗೆ ಗೆಳೆಯರಂತೆ ವ್ಯವಹರಿಸಿ. ಮಾತನಾಡುವಾಗ ಯಾವಾಗಲೂ 'ನಾನು ನಿನ್ನ ವಯಸ್ಸಿನಲ್ಲಿದ್ದಾಗ' ಎಂಬುದನ್ನು ಬಳಸಬೇಡಿ. ಮಕ್ಕಳು ತೊಂದರೆಯಲ್ಲಿದ್ದಾಗ 'ಅಯ್ಯೋ ಇಷ್ಟೇನಾ' ಎಂದು ನಿರ್ಲಕ್ಷ್ಯ ಮಾಡಬೇಡಿ. ನಿಮಗೆ ಚಿಕ್ಕದಾಗಿ ತೋರುವ ಸಮಸ್ಯೆ ಮಕ್ಕಳಿಗೆ ದೊಡ್ಡದು. ಸಾಧ್ಯವಾದಷ್ಟೂ ಅವರಿಗೊಪ್ಪುವ ರೀತಿಯಲ್ಲಿ ಬಗೆಹರಿಸಿ.

★ ಸಂಬಂಧಗಳ ಬಂಧ ಬಿಗಿಯಾಗಿರಲು ಪ್ರಮುಖ ಕಾರಣ ನಂಬಿಕೆ, ವಿಶ್ವಾಸ ಹಾಗೂ ಪ್ರೀತಿ. ನಿಮ್ಮ ಮಕ್ಕಳಲ್ಲಿ ನಂಬಿಕೆಯಿಡಿ. ಅವರೂ ನಿಮ್ಮನ್ನು ನಂಬುತ್ತಾರೆ. ನೀವೇನು ಮಾಡುತ್ತೀರೋ ಮಕ್ಕಳೂ ಅದನ್ನೇ ಅನುಸರಿಸುತ್ತಾರೆ. ಸಾಧ್ಯವಾದಷ್ಟೂ ಮನೆಯ ವಾತಾವರಣ ತಿಳಿಯಾಗಿರುವಂತೆ ನೋಡಿಕೊಳ್ಳಿ. ನಿಮ್ಮ ನಿಮ್ಮಲ್ಲಿ ಎಷ್ಟೇ ಭಿನ್ನಾಭಿಪ್ರಾಯಗಳಿದ್ದರೂ ಅದನ್ನು ಮಕ್ಕಳ ಮುಂದೆ ತೋರ್ಪಡಿಸಿಕೊಳ್ಳಬೇಡಿ.

ಮುಖ್ಯವಾಗಿ ಸಮಾಜದಲ್ಲಿ ನಿಮ್ಮ ಸ್ಥಾನಮಾನವನ್ನು ಹೆಚ್ಚಿಸಿಕೊಳ್ಳಲು ಮಕ್ಕಳನ್ನು ಬಳಸಿಕೊಳ್ಳಬೇಡಿ. ನನ್ನ ಮಗ/ ಮಗಳು ಶಾಲೆಗೇ ಮೊದಲು ಎಂದು ಹೆಮ್ಮೆಯಿಂದ ಹೇಳಿಕೊಂಡು ತಿರುಗಲು 'ಓದು' ಎಂದು ಮಕ್ಕಳ ಮೇಲೆ ಒತ್ತಡ ಹೇರಬೇಡಿ. ಮಕ್ಕಳಿಗೂ ತಮ್ಮದೇ ಆದ ಆಸಕ್ತಿಯ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳುವ ಹಕ್ಕು ಇದೆ. ಅವರಿಂದ ಅದನ್ನು ಕಿತ್ತುಕೊಳ್ಳಬೇಡಿ.




